# ಕಪ್ಪೆಯೂ ಮೊಸಳೆಯೂ



ಒಂದು ಕಾಡಿನಲ್ಲಿ ನದಿಯಿತ್ತು. ಅಲ್ಲಿ ಮೊಸಳೆಯೊಂದು ವಾಸ ಮಾಡಿಕೊಂಡಿತ್ತು. ಅಲ್ಲಿಯ ಬಂಡೆಗಲ್ಲುಗಳ ಮಧ್ಯದಲ್ಲಿ ಕಪ್ಪೆಯೂ ವಾಸಿಸುತ್ತಿತ್ತು.

ಕಪ್ಪೆಯು ದಿನವೂ ವಟಗುಟ್ಟುತ್ತಿರುವುದರಿಂದ ಮೊಸಳೆಗೆ ಬೇಸರವಾಗುತ್ತಿತ್ತು. ಅದಕ್ಕಾಗಿ ಮೊಸಳೆಯು 'ನಿನ್ನ ಕರ್ಕಶವಾದ ಶಬ್ದದಿಂದ ಇಲ್ಲಿ ನೀರು ಕುಡಿಯಲು ಬಂದ ಪ್ರಾಣಿಗಳು ಭಯಭೀತಗೊಳ್ಳುತ್ತವೆ, ಹಾಗಾಗಿ ನನಗೆ ಬೇಟೆಗಳು ಲಭಿಸುತ್ತಿಲ್ಲ' ಎಂದು ಆಕ್ರೋಶದಿಂದ ಹೇಳಿತು.

ಕಪ್ಪೆ 'ದಿನವೂ ವಟಗುಟ್ಟುವುದು ನನ್ನ ಸ್ವಭಾವ. ಅದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ' ಎಂದು ಹೊಟ್ಟೆ ಉಬ್ಬಿಸಿ ಹೇಳಿತು. ಅದಕ್ಕೆ ಮೊಸಳೆಯು ಮತ್ತಷ್ಟು ಕ್ರೋಧಗೊಂಡು ಕಪ್ಪೆಯ ಮೇಲೆ ಆಕ್ರಮಣ ಮಾಡಿತು. ತಕ್ಷಣ ಕಪ್ಪೆಯು ಅದರಿಂದ ತಪ್ಪಿಸಿಕೊಂಡಿತು.

ಮೊಸಳೆಯ ತೊಂದರೆಯಿಂದ ತಪ್ಪಿಸಿಕೊಳ್ಳಲು ಕಪ್ಪೆಯು ನೀರು ಕುಡಿಯಲು ಬಂದ ಸಿಂಹ, ಹುಲಿಗಳ ಮೊರೆ ಹೋಯಿತು. ಅವು ನೀರು ಕುಡಿದು ಹೊರಟಾಗ ಅವುಗಳ ಹಿಂದೆ ಬಿತ್ತು.

'ಅಣ್ಣಂದಿರಾ, ನಿಮ್ಮ ಹತ್ತಿರ ಒಂದು ವಿಷಯವನ್ನು ಹೇಳಹೇಕಿತ್ತು' ಎಂದು ಅವುಗಳಿಗೆ ಕೇಳುವಂತೆ ಜೋರಾಗಿ ಕೂಗಿ ಹೇಳಿತು. ಅವುಗಳು ಕೂಡಲೆ ಹಿಂದಿರುಗಿ ಕಪ್ಪೆಯ ಮಾತುಗಳನ್ನು ಆಲಿಸತೊಡಗಿದವು.

'ಏನದು?' ಎಂದು ಕುತೂಹಲದಿಂದ ಪ್ರಶ್ನಿಸಿದವು. 'ನದಿಯಲ್ಲಿ ಒಂದು ಕ್ರೂರ ಮೊಸಳೆಯು ವಾಸ ಮಾಡಿಕೊಂಡಿದೆ. ಅಲ್ಲಿಗೆ ನೀರು ಕುಡಿಯಲು ಬಂದ ಪ್ರಾಣಿಗಳನ್ನು ಮೋಸದಿಂದ ಬೇಟೆಯಾಡುತ್ತದೆ. ಇದರಿಂದ ಮುಂದೊಂದು ದಿನ ಕಾಡಿನ ಪ್ರಾಣಿಗಳ ಸಂಖ್ಯೆಯು ಕ್ಷೀಣಿಸುತ್ತದೆ. ಅಲ್ಲದೆ ನಿಮಗೂ ಬಲಿಯಾಗುವ ಪ್ರಾಣಿಗಳ ಸಂಖ್ಯೆಯು ಕಡಿಮೆಯಾಗುತ್ತದೆ. ಹೇಗಾದರೂ ಮಾಡಿ ನಾನು ಅದರ ಸ್ನೇಹವನ್ನು ಸಂಪಾದಿಸಿ ನಿಮ್ಮ ಬಳಿಗೆ ಕರೆ ತರುತ್ತೇನೆ. ಆಗ ತಕ್ಷಣವೆ ನೀವು ಅದರ ಮೇಲೆ ಮಿಂಚಿನ ದಾಳಿ ಮಾಡಿ ಕೊಂದು ಹಾಕಿರಿ!' ಎಂದಿತು. ಅದಕ್ಕೆ ಅವು ಸಮ್ಮತಿಸಿದವು.

ಅಂದು ಕಪ್ಪೆಯು ವಟಗುಟ್ಟುವುದನ್ನು ನಿಲ್ಲಿಸಿತು. ಇದನ್ನು ಮೊಸಳೆಯು ಗಮನಿಸುತ್ತಲೇ ಇತ್ತು. ಮರುದಿನ ಕಪ್ಪೆಯು ಮೊಸಳೆಯ ಹತ್ತಿರ ಬಂದು, 'ಅಣ್ಣಾ ಬಹಳ ಯೋಚಿಸಿ ನನ್ನ ಬುದ್ಧಿಯನ್ನು ತಿದ್ದಿಕೊಂಡಿದ್ದೇನೆ. ಇಂದಿನಿಂದ ನಾನು ನಿನ್ನ ಸ್ನೇಹಿತ, ನಿನಗೆ ಯಾವ ಕಾರಣಕ್ಕೂ ತೊಂದರೆ ಕೊಡುವುದಿಲ್ಲ' ಎಂದಿತು.

ಕಪ್ಪೆಯ ಸಂತಸದ ಮಾತುಗಳಿಂದ ಮೊಸಳೆಗೆ ಆನಂದವಾಯಿತು, ಅದನ್ನು ತನ್ನ ಬೆನ್ನ ಮೇಲೆ ಹತ್ತಿಸಿಕೊಂಡು ನದಿಯಲ್ಲಿ ಸವಾರಿ ಮಾಡಿತು.

ಕಪ್ಪೆಯು 'ಮಿತ್ರಾ ಹೀಗೆಯೆ ನಾನು ನೆಲದ ಮೇಲೆ ನಿನ್ನ ಬೆನ್ನ ಮೇಲೆ ಸವಾರಿ ಮಾಡುವ ಬಯಕೆಯಾಗಿದೆ' ಎಂದಿತು. ಕೂಡಲೆ ಮೊಸಳೆಯು ಅದನ್ನು ಹೊತ್ತುಕೊಂಡು ನದಿಯಿಂದ ಹೊರಗೆ ಬಂದಿತು. ತಕ್ಷಣ ಎಲ್ಲಿದ್ದವೋ ಏನೋ ಹುಲಿ, ಸಿಂಹಗಳು ಮೊಸಳೆಯ ಮೇಲೆ ದಾಳಿ ಮಾಡಿದವು. ಆಗ ಕಪ್ಪೆಯು ಪಕ್ಕಕ್ಕೆ ಜಿಗಿಯಿತು. ಮೊಸಳೆಯು ನದಿಯಿಂದ ದೂರವೇ ಇದ್ದುದರಿಂದ ತಪ್ಪಿಸಿಕೊಳ್ಳಲು ಅದಕ್ಕೆ ಆಗಲೇ ಇಲ್ಲ! ಹಾಗಾಗಿ ಅದು ಸುಲಭವಾಗಿ ತುತ್ತಾಯಿತು.

**-ರಾಜಕುಮಾರ ಭೀ.ವಗ್ಯಾನವರ,**
**ಕೆರೂರ**



# ಚಿಟ್ಟೆ

ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಹಾರಿತು ನೋಡು ಪುಟ್ಟ ಚಿಟ್ಟೆ
ಪುಕ್ಕವು ಎಲ್ಲ ಬಣ್ಣದ ಬಟ್ಟೆ
ನೋಡುವ ಕಣ್ಣಿಗೆ ಅಂದದ ಕೊಟ್ಟೆ

ಅಲ್ಲಿಂದಿಲ್ಲಿಗೆ ನೆಗೆಯುತ ಹಾರುತ
ಹೂವನು ಮೂಸಿ ರಸವನು ಹೀರುತ
ಹಿಡಿಯಲು ಹೋದರೆ ಸಿಗದೆ ಓಡಿ
ಆಟವಾಡಿಸಿ ಓಡುತಲಿರುವೆ

ಹಸಿರಿನ ಚಿಟ್ಟೆ, ಹಳದಿಯ ಚಿಟ್ಟೆ
ಕಪ್ಪಿನ ಚಿಟ್ಟೆ, ಬೆಳ್ಳಿಯ ಚಿಟ್ಟೆ
ಕೆಂಪಿನ ಚಿಟ್ಟೆ, ಕಂದು ಚಿಟ್ಟೆ
ನೀಲಿಯ ಚಿಟ್ಟೆ, ಹೊಳಪಿನ ಚಿಟ್ಟೆ

ಹೂವಿಂದೂವಿಗೆ ಹಾರುತಲಿರುವ
ಪಕಳೆಯ ಮೇಲೆ ಕೂರುತಲಿರುವ
ಮೇಲಕೆ ಹಾರಿ ಕೆಳಕ್ಕೆ ಇಳಿದು
ಮಧುವನು ಹೀರುತ ಹೀರುತಲಿ

ಎಳೆಯರಿಗಂದವ ತರಿಸುವ ಚಿಟ್ಟೆ
ಮನಕೆ ಆನಂದವ ನೀಡುವ ಚಿಟ್ಟೆ
ಬಾ ನನ್ನೊಡನೆ ಆಡಲು ಚಿಟ್ಟೆ
ಇಲ್ಲವೆ ನಾ ನಿನ್ನಯ ಸಂಗವ ಬಿಟ್ಟೆ

**-ಗೌ.ರು. ಓಂಕಾರಯ್ಯ,**
**ಚಿಕ್ಕಮಗಳೂರು**